**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.**

| | |
|---|---|
| ಸಿ.ಸಿ. ನಂಬರ್ | : 520/2024 |
| ಸಿ.ಡಬ್ಲ್ಯೂ | : 07 |
| ಪಿ.ಡಬ್ಲ್ಯೂ | : 02 |
| ಸಾಕ್ಷಿಯ ಹೆಸರು | : ವೆಂಕಟೇಶ ಸಬ್ಬೇಲಿ |
| ವಯಸ್ಸು | : 55 ವರ್ಷ |
| ಉದ್ಯೋಗ | : ಕೂಲಿ |
| ವಾಸ ಸ್ಥಳ | : ಮಾನವಿ |

ದಿನಾಂಕಃ 14/08/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿಯ ಪರಿಚಯವಿಲ್ಲ. ಚಾಸಾ-1 ಮತ್ತು 8 ರವರ ಪರಿಚಯ ಇದೆ.

2. ಸಾಕ್ಷಿಗೆ ತಮ್ಮ ಸಹಿಯನ್ನು ತೋರಿಸಿದ್ದು, ಅದನ್ನು ನೋಡಿ ಗುರುತಿಸಿದ ಕಾರಣ ಪಂಚನಾಮೆಯನ್ನು **ನಿಪಿ-2** ಎಂದು ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅಣ್ಣಿಗೇರಿಯ ಆಸ್ಪತ್ರೆಯಲ್ಲಿ ಮೃತರ ಶವ ಗುರುತಿಸುವ ಸಲುವಾಗಿ ಸಂ.04.00 ಗಂಟೆಗೆ ಮಾಡಲಾಗಿರುತ್ತದೆ. ನನ್ನ ಜೊತೆ ಚಾಸಾ-8 ರವರು ಹಾಜರಿದ್ದರು.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ –**

ದಿಃ 25-11-2020 ರಂದು ಸಂ.04-15 ರಿಂದ 05-15 ಗಂಟೆಯವರೆಗೆ ಅಪಘಾತ ಸ್ಥಳವಾದ ಗದಗ-ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿಯ ಕೊಂಡಿಕೊಪ್ಪ ಕ್ರಾಸ್ ಹತ್ತಿರ

ಸಂಭವಿಸಿದ ಅಪಘಾತಕ್ಕೆ ಸಂಬಂಧಿಸಿ ನನ್ನ ಹಾಗೂ ಚಾಸಾ-8 ರವರ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಭಾವಚಿತ್ರಗಳನ್ನು **ನಿ.ಪಿ.3** ಮತ್ತು **ನಿ.ಪಿ.4** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಬಿ ಎಸ್ ಪಿ ವಕೀಲರಿಂದ**

ಚಾಸಾ-1 ರವರು ನಮ್ಮ ಊರಿನ ನಿವಾಸಿ ಎಂದರೆ ಸರಿ. ನಾನು ಸದರಿಯವರೊಂದಿಗೆ ಆತ್ಮೀಯವಾಗಿದ್ದೇನೆ ಎಂದರೆ ಸರಿ. ಪಂಚನಾಮೆಗಾಗಿ ಪೋಲೀಸರು ನನಗೆ ನೋಟಿಸ ನೀಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಪೋಲೀಸ ರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಾನು ಹಾಗೂ ಚಾಸಾ-8 ರವರು ಸದರಿ ಪಂಚನಾಮೆ ಕಾಲಕ್ಕೆ ಹಾಜರಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**